ಆ. ಇದು ಕೆ.ಹೆಚ್.ಎಸ್.ಡಿ.ಸಿ. ವತಿಯಿಂದ ಮಾಡಲಾಗಿದ್ದರೂ ಪೀಠೋಪಕರಣ, ಜನರೇಟರ್ ರೂಂ, ಹೊರರೋಗಿಗಳು ಕುಳಿತುಕೊಳ್ಳಲು ಕುರ್ಚಿಗಳು ಇತ್ಯಾದಿ ಸೌಲಭ್ಯವಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ. ಈ ಎಲ್ಲಾ ಸೌಲಭ್ಯಗಳನ್ನು ಯಾವಾಗ ಕಲ್ಪಿಸಲಾಗುವುದು?

ಈ. ಕೂಡಲೇ ಸೌಲಭ್ಯಗಳನ್ನು ಕಲ್ಪಿಸಿ ರೋಗಿಗಳಿಗೆ ಸರ್ಕಾರ ಅನುಕೂಲ ಮಾಡಿಕೊಡುವುದೇ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ. ತುರುವೇಕೆರೆ ತಾಲೂಕು ಮಟ್ಟದ ಆಸ್ಪತ್ರೆಯನ್ನು 30 ಹಾಸಿಗೆಗಳ ಆಸ್ಪತ್ರೆಯಾಗಿ ಅಭಿವೃದ್ಧಿ ಪಡಿಸಿ ಎಲ್ಲಾ ಕಾಮಗಾರಿಗಳನ್ನು ದಿನಾಂಕ: 27.6.2001 ರಂದು ಪೂರ್ಣಗೊಳಿಸಿ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ಹಸ್ತಾಂತರಿಸಲಾಗಿದೆ, ಈ ಆಸ್ಪತ್ರೆಯು ಕಾರ್ಯನಿರ್ವಹಿಸುತ್ತಿದೆ.

ಆ. ಹೌದು.

ಇ. ಈ ಆಸ್ಪತ್ರೆಗೆ 5 ಕಿಲೋ ವ್ಯಾಟ್ಸ್ ಸಾಮರ್ಥ್ಯದ ಜನರೇಟರನ್ನು ಸರಬರಾಜು ಮಾಡಲಾಗಿದೆ. ಇದನ್ನು ಅಳವಡಿಸಲು ವೈದ್ಯಾಧಿಕಾರಿಗಳ ಸಹಮತದ ಮೇರೆ ಕೊಠಡಿಯನ್ನು ಗುರುತಿಸಲಾಗಿದೆ. ವೈರಿಂಗ್ ಕೆಲಸ ಬಾಕಿ ಇದ್ದು ಸಧ್ಯದಲ್ಲಿಯೇ ಅದನ್ನು ಪೂರ್ಣ ಪ್ರಮಾಣದಲ್ಲಿ ಸ್ಥಾಪಿಸಲಾಗುವುದು.

ಆಸ್ಪತ್ರೆಯ ಪೀಠೋಪಕರಣಗಳಾದ ಸ್ಟ್ರೆಚರ್ ಆನ್ ಟ್ರಾಲಿ, ಕಬ್ಬಿಣದ ಹಾಸಿಗೆ, ಸಲೈನ್ ಸ್ಟಾಂಡ್, ಪುಟ್ ಸ್ಟೆಪ್ಸ್, ಹಾಸಿಗೆ ಮತ್ತು ದಿಂಬುಗಳು, ಬೇಬಿ ಕಾಟ್ ಮತ್ತು ರಿವಾಲ್ವಿಂಗ್ ಸ್ಟೂಲು ಸರಬರಾಜು ಮಾಡಲಾಗಿದೆ. ಹೊರ ರೋಗಿಗಳಿಗೆ ಕುಳಿತುಕೊಳ್ಳಲು ಕುರ್ಚಿಗಳ ಖರೀದಿಗೆ ಟೆಂಡರ್ ಕರೆಯಲಾಗಿದೆ. ಖರೀದಿ ಪ್ರಕ್ರಿಯೆ ಮುಗಿದ ತಕ್ಷಣ ಇದನ್ನು ಸರಬರಾಜು ಮಾಡಲಾಗುವುದು.

ಈ. ಹೌದು.

ಆಶ್ರಯ ಮನೆ ಕಟ್ಟಲು ಅನುಮತಿ

1509(2000) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಆಶ್ರಯ ಮನೆಗಳ ನಿರ್ಮಾಣಕ್ಕೆ ಸರ್ವೆ ನಂಬರ್‌ಗಳಲ್ಲಿ ಫಾರಂ 9 ಹಾಗೂ 10 ರಲ್ಲಿ ಅವಕಾಶವಿತ್ತೆ;

ಆ. ಹಾಗಿದ್ದಲ್ಲಿ, ಇದನ್ನು ನಿಲ್ಲಿಸಲು ಕಾರಣವೇನು;

ಇ. ಬಡವರಿಗೆ ಆಶ್ರಯ ಮನೆಗಳನ್ನು ವಿತರಿಸಿ ಈಗ ಕಿತ್ತುಕೊಳ್ಳುವ ಉದ್ದೇಶ ಏನು;

ಈ. ಬಡಜನರಿಗೆ ಅನುಕೂಲವಾಗುವಂತೆ ಮತ್ತೆ ಸರ್ವೆ ನಂಬರ್‌ನಲ್ಲಿ ಮನೆ ಕಟ್ಟಿಕೊಳ್ಳಲು ಅವಕಾಶ ಮಾಡಿಕೊಡಲಾಗುವುದೆ;

ಉ. ಸರ್ಕಾರ ಈ ಬಗ್ಗೆ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು)

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಈ. ಉದ್ಭವಿಸುವುದಿಲ್ಲ.

ಉ. ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಉರ್ದುಶಿಕ್ಷಣ ನಿದೇಶನಾಲಯ ಸ್ಥಾಪನೆ

1510(1868) ಶ್ರೀ ನಾಯಕ್. ಜೆ.ಡಿ. (ಭಟ್ಕಳ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಉರ್ದು ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಮಲತಾಯಿ ಧೋರಣೆ ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಉರ್ದು ಶಿಕ್ಷಣ ಅಭಿವೃದ್ಧಿ ಬಗ್ಗೆ ಉರ್ದು ಶಿಕ್ಷಣ ನಿರ್ದೇಶನಾಲಯ ಸ್ಥಾಪಿಸುವ ಬಗ್ಗೆ ಸರ್ಕಾರದ ಚಿಂತನೆ ಏನು?

ಪ್ರೋ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ. ಇಲ್ಲ

ಉರ್ದು ಶಾಲೆಗಳ ಆಡಳಿತದಲ್ಲಿ ಕೆಲವು ತೊಂದರೆಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ. ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿ ನೂತನ ಪ್ರೌಢ ಶಾಲೆಗಳ ಮಂಜೂರಾತಿ

1511(2040) ಶ್ರೀಮತಿ ಪಾರ್ವತಮ್ಮ ಶ್ರೀಕಂಠಯ್ಯ (ಶ್ರೀರಂಗಪಟ್ಟಣ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಕಳೆದ ಸಾಲಿನಲ್ಲಿ ಹೊಸದಾಗಿ ಪ್ರೌಢಶಾಲೆಗಳನ್ನು ಪ್ರಾರಂಭಿಸಲಾಗಿದೆಯೇ; ಹಾಗಿದ್ದರೆ, ಎಷ್ಟು ಪ್ರೌಢಶಾಲೆಗಳು ಪ್ರಾರಂಭವಾದವು;

ಆ. ಶ್ರೀ ರಂಗಪಟ್ಟಣದ ಬೇವಿನಹಳ್ಳಿ ಮಹದೇವಪುರ, ಟಿ.ಎಂ. ಹೊಸೂರುಗಳಲ್ಲಿ ಹೊಸದಾಗಿ ಪ್ರೌಢಶಾಲೆಗಳು ಪ್ರಾರಂಭವಾಗಿದೆಯೇ; ಪ್ರಾರಂಭವಾಗಿಲ್ಲದಿದ್ದರೆ, ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; ಇದ್ದಲ್ಲಿ ಯಾವಾಗ ಪ್ರಾರಂಭವಾಗುತ್ತದೆ.

ಇ. ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಎಷ್ಟು ಪ್ರಾಥಮಿಕ ಶಾಲಾ ಉಪಧ್ಯಾಯರುಗಳಿರುತ್ತಾರೆ; ಕೊರತೆ ಏನಾದರೂ ಇದೆಯೇ; ಇದ್ದಲ್ಲಿ, ತುಂಬುವ ಬಗ್ಗೆ ಕೈಗೊಂಡಿರುವ ಕ್ರಮವೇನು?

ಪ್ರೋ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ. ಹೌದು

134 ಪ್ರೌಢ ಶಾಲೆಗಳನ್ನು ಪ್ರಾರಂಭಿಸಲಾಗಿದೆ.